

### ಭಾಗ – 1

ಅಲ್ಲಮಪ್ರಭುವಿಗೆ ಪಕ್ಕನೆ ಎಚ್ಚರವಾಗಲು ಅದೊಂದು ಸಣ್ಣ ಕನಸು ಕಾರಣವಾಗಿತ್ತು. ಬನವಾಸಿಯ ಮಧುಕೇಶ್ವರನ ದರ್ಶನಕ್ಕೆ ಮೊದಲು ಪಕ್ಕದ ವರದಾ ನದಿಯಲ್ಲಿ ಸ್ನಾನ ಮಾಡಲು ಹೋಗಿದ್ದವನು ಇದ್ದಕ್ಕಿದ್ದಂತೆ ನದಿಯಲ್ಲಿ ಉಂಟಾದ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಾ ಕಡೆಗೆ ಸೋತು ಉಸಿರುಗಟ್ಟಿ ಮುಳುಗತೊಡಗಿದ್ದ. ಆಗ ತನ್ನ ಬಲವನ್ನೆಲ್ಲಾ ಪ್ರಯೋಗಿಸಿ ನೀರಿನಿಂದ ಹೊರಬರಲು ಈಜಲು ಪ್ರಯತ್ನಿಸಿದವನಿಗೆ ಕನಸು ಕಳಚಿ ಎಚ್ಚರವಾದಾಗ ಉಸಿರಾಟ ಬಿರುಸಾಗಿತ್ತಲ್ಲದೆ